5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 03.09.2025 ರಂದು ಪ್ರಮಾಣ ವಚನ ಬೋಧಿಸಲಾಗಿದೆ.

ಸಿ. ಡಬ್ಲ್ಯೂ: 12 ಪಿ. ಡಬ್ಲ್ಯೂ:8

| | |
|---|---|
| ಸಾಕ್ಷಿದಾರರ ಹೆಸರು | ನಾರಾಯಣ |
| ತಂದೆಯ ಹೆಸರು | ಜವರಾಯಿಗೌಡ |
| ವಯಸ್ಸು | 46 ವರ್ಷ |
| ಉದ್ಯೋಗ | ವ್ಯವಸಾಯ ಹಾಗೂ ಕೂಲಿ |
| ವಾಸ | ನೆಟಕಲ್ಲು ಗ್ರಾಮ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಹುಟ್ಟಿದಾಗಿನಿಂದ ನೆಟ್ಟಕಲ್ಲು ಗ್ರಾಮದಲ್ಲಿ ವಾಸವಾಗಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಅವರು ನಮ್ಮ ಊರಿನವರಾಗಿರುತ್ತಾರೆ. ಅವರಿಗೆ 3 ಜನ ಮಕ್ಕಳಿರುತ್ತಾರೆ. ಒಬ್ಬ ಗಂಡು ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳು ಅವರಿಗೆ ಇರುತ್ತಾರೆ. ಸದರಿ ಆರೋಪಿಯ ಹೆಣ್ಣು ಮಕ್ಕಳು ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಿರುತ್ತಾರೆ. ಅವರ ಗಂಡುಮಗ ಮೈಸೂರಿನಲ್ಲಿ ವಾಸವಿದ್ದಾರೆ.
2. ಆರೋಪಿಯ ಮನೆ ಮತ್ತು ನಮ್ಮ ಮನೆ ನೆಟ್ಟಕಲ್ಲು ಗ್ರಾಮದಲ್ಲಿ ಒಂದೇ ಬೀದಿಯಲ್ಲಿ ಇರುತ್ತದೆ. ಆರೋಪಿಯನ್ನು ಜೋಗಪ್ಪ ಎಂದು ಕರೆಯುತ್ತಾರೆ, ಅವರ ಹೆಸರು ಸಿದ್ದೇಗೌಡ ಎಂದು ನನಗೆ ಗೊತ್ತಾಗಿರುತ್ತದೆ.
3. ಸುಮಾರು 3 ರಿಂದ 4 ವರುಷಗಳ ಹಿಂದೆ ಆರೋಪಿಯ ಮನೆಯನ್ನು ಕಟ್ಟಲಾಗಿದೆ. ಸದರಿ ಮನೆಯಲ್ಲಿ ಆರೋಪಿ, ಆತನ ಹೆಂಡತಿ ಹಾಗೂ ಅವರ ಮಗ ವಾಸವಿದ್ದರು. ಆರೋಪಿಯು ಕೂಲಿ ಕೆಲಸ ಮಾಡುತ್ತಿದ್ದರು. ಆರೋಪಿಯ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ, ಆತನಿಗೆ ಮನೆ ಇರುವ ಬಗ್ಗೆ ಗೊತ್ತು. ಸದರಿ ಮನೆಯಲ್ಲಿ ಈಗ ಯಾರು ವಾಸವಿಲ್ಲ. ಆ ಮನೆಗೆ ಹಬ್ಬ ಹರಿದಿನಗಳಲ್ಲಿ ಆರೋಪಿಯ ಮಕ್ಕಳು ಬಂದು ಹೋಗುತ್ತಿರುತ್ತಾರೆ. ಆರೋಪಿಯು ಈಗ ಜೈಲಿನಲ್ಲಿ ಇದ್ದಾರೆ ಎಂದು ನನಗೆ ಗೊತ್ತು.

4. ಸುಮಾರು 3 ವರುಷಗಳ ಹಿಂದೆ ಆರೋಪಿಯ ಹೆಂಡತಿ ತೀರಿಕೊಂಡಿರುತ್ತಾರೆ. ಸದರಿ ಆರೋಪಿಯ ಹೆಂಡತಿ ತೀರಿಕೊಂಡ ಸಮಯದಲ್ಲಿ ನಾನು ಇರಲಿಲ್ಲವೆಂದು ಅನ್ನಿಸುತ್ತಿದೆ. ಆರೋಪಿಯ ಹೆಂಡತಿ, ಸೀಮೆಎಣ್ಣೆಯ ಕಾರಣದಿಂದ ಸುಟ್ಟು ತೀರಿಕೊಂಡಿದ್ದಾಳೆ ಎಂದು ನನಗೆ ಗೊತ್ತಾಗಿರುತ್ತದೆ. ಆ್ಯಂಬುಲೆನ್ಸ್ ನಮ್ಮ ಊರಿಗೆ ಬಂದು ಹೋದ ನಂತರ ಸದರಿ ವಿಚಾರ ನನಗೆ ಗೊತ್ತಾಗಿರುತ್ತದೆ. ಸದರಿ ಘಟನೆಯು, ಸಂಜೆ 7 ರಿಂದ 7.30 ರ ಸಮಯದಲ್ಲಿ ನಡೆದಿರಬಹುದು.
5. ಸದರಿ ಆರೋಪಿಯ ಮನೆಯ ಬಳಿ ಜನ ಸೇರಿದ್ದಾಗ ನಾನು ಅಲ್ಲಿಗೆ ಹೋಗಿರುತ್ತೇನೆ. ನಾನು ಸದರಿ ಆರೋಪಿಯ ಹೆಂಡತಿಯನ್ನು ನೋಡಿಲ್ಲ, ಆ ಕಾರಣದಿಂದ, ಆಕೆಗೆ ಎಲ್ಲೆಲ್ಲಿ ಸುಟ್ಟ ಗಾಯಗಳಾಗಿತ್ತು ಎಂದು ನನಗೆ ಗೊತ್ತಿಲ್ಲ ನಾನು ಹೋದಾಗ ಆರೋಪಿಯ ಮನೆಯವರು ಎಲ್ಲಿ ಇದ್ದರೆಂದು ನನಗೆ ಗೊತ್ತಿಲ್ಲ. ಎಷ್ಟು ದಿನಗಳ ನಂತರ ಸದರಿ ಆರೋಪಿಯ ಹೆಂಡತಿ ತೀರಿಕೊಂಡರೆಂದು ನನಗೆ ಖಚಿತವಾಗಿ ಗೊತ್ತಿಲ್ಲ. ಊರಿನ ಜನರು ಸೀಮೆಎಣ್ಣೆ ತಾಗಿದ್ದರಿಂದ ಸುಟ್ಟ ಗಾಯಗಳಾಗಿ ಆರೋಪಿಯ ಹೆಂಡತಿ ತೀರಿಕೊಂಡಳೆಂದು ಹೇಳುತ್ತಿದ್ದರು. ಬೇರೆ ಯಾರಿಗೆ ಸದರಿ ಘಟನೆಯಲ್ಲಿ ಗಾಯಗಳಾಗಿತ್ತೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ.
6. ಮುದ್ದೆಮಾಲು -1 ರ ಬಗ್ಗೆ ನನಗೆ ಗೊತ್ತಿಲ್ಲ. ಮುದ್ದೆ ಮಾಲು 2 ರಿಂದ 4 ನ್ನು ನಾನು ನೋಡಿಲ್ಲ. ಈಗಲೂ ಸಹ ನನಗೆ, ಆರೋಪಿಯ ಹೆಂಡತಿಗೆ ಸುಟ್ಟ ಗಾಯ ಹೇಗೆ ಆಯಿತು ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

7. ದಿಃ 03.08.2022 ರಂದು ಸಂಜೆ 7.00 ಗಂಟೆ ಸಮಯದಲ್ಲಿ ಆರೋಪಿಯ ಹೆಂಡತಿ ಮಹದೇವಮ್ಮ ರವರಿಗೆ ಸುಟ್ಟ ಗಾಯಗಳಾಗಿತ್ತು ಎಂದರೆ ಸಾಕ್ಷಿಯು, ಇರಬಹುದು ಎಂದು ಹೇಳುತ್ತಾರೆ. ಆ ದಿನ ನಾನು ಕುರುಬ ಜನಾಂಗದ ಬೀದಿಯಲ್ಲಿ ನಿಂತಿದ್ದಾಗ, ಆರೋಪಿಯ ಮನೆಯ ಕಡೆಯಿಂದ ಕೂಗಿಕೊಂಡ ಶಬ್ದ ಕೇಳಿ ಅಲ್ಲಿಗೆ ಓಡಿ ಹೋದಾಗ, ನಮ್ಮ ಊರಿನ ಶಿವಣ್ಣ ಮತ್ತು ಅವರ ಹೆಂಡತಿ ಮಹದೇವಮ್ಮ, ಫ್ರಾಸಾ. 2, 3 ಮತ್ತು ಚಾಸಾ. 11 ರವರು

ಬಂದರು ಎಂದರೆ ನನಗೆ ಗೊತ್ತಿಲ್ಲ. ಅಷ್ಟರಲ್ಲಿ ಆರೋಪಿಯು, ಅವರ ಮನೆಯ ಒಳಗಿಂದ ಹೊರಬಂದು ಬೀದಿಯಲ್ಲಿ ಗಾಬರಿಯಲ್ಲಿ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯಕ್ಕೆ ನಾವು ಮನೆಯ ಒಳಗೆ ಹೋದಾಗ, ಸದರಿ ಮಹದೇವಮ್ಮ ಮತ್ತು ಪ್ರಾಸಾ. 1 ರವರು ಬೆಂಕಿಯಿಂದ ಸುಟ್ಟು ಗಾಯಗಳಿಂದ ಕೂಗಾಡುತ್ತಿದ್ದರು ಎಂದರೆ ಸಾಕ್ಷಿಯು, ನಾನು ಮನೆಯ ಒಳಗೆ ಹೋಗಿಲ್ಲ ಎಂದು ಹೇಳಿ, ನಾನು ಅಲ್ಲಿಗೆ ಹೋಗಿಲ್ಲ ಎಂದು ಹೇಳುತ್ತಾರೆ. ನಂತರ ನಾನು, ಪ್ರಾಸಾ.2, 3 ಮತ್ತು ಚಾಸಾ.11 ರವರು ಹೋಗಿ, ಬೆಂಕಿ ಆರಿಸಿ, ಮಹದೇವಮ್ಮ ಮತ್ತು ಪ್ರಾಸಾ.1 ರವರನ್ನು ವಿಚಾರಿಸಿದ್ದೆವು ಎಂದರೆ ಸಾಕ್ಷಿಯು ನಾನು ಅಲ್ಲಿಗೆ ಹೋಗಿಲ್ಲ ಎಂದು ಹೇಳುತ್ತಾರೆ.

8. ನಾವು ವಿಚಾರಿಸಿದಾಗ ಪ್ರಾಸಾ. 1 ರವರು, ಸಂಜೆ 7.00 ಗಂಟೆ ಸಮಯದಲ್ಲಿ ತಾನು ಮತ್ತು ತನ್ನ ತಾಯಿ ಮನೆಯಲ್ಲಿ ಇದ್ದಾಗ, ಆರೋಪಿಯು ಏಕಾಏಕಿ ಮನೆಯ ಒಳಗೆ ಬಂದು ಹಾಲ್ ನಲ್ಲಿ ಕುಳಿತಿದ್ದ ತಮಗೆ, ಬೋಳಿ ಮಕ್ಕಳಾ, ಸೂಳೆ ಮಕ್ಕಳಾ, ಅವ್ವ ಮಗನಿಗೆ ಈ ಮನೆ ಕಟ್ಟಿಸಿ ಸಾಕಾಗಿತ್ತಾ, ಈ ಮನೆ ನನ್ನದು, ಆಡುಗಳು ನನ್ನದು, ನೀವಿಬ್ಬರು ಮನೆಯಿಂದ ಹೊರ ಹೋಗಿ ಎಂದು ಬೈದು ಕೊಲೆ ಮಾಡುವ ಉದ್ದೇಶದಿಂದ ತಾನು ತಂದಿದ್ದ ಸೀಮೆಎಣ್ಣೆಯನ್ನು ತನ್ನ ತಾಯಿ ಮಹದೇವಮ್ಮಳ ಮೇಲೆ ಎರಚಿ ದೊಣ್ಣೆಗೆ ಕಟ್ಟಿಕೊಂಡು ಬಂದಿದ್ದ ಬಟ್ಟೆಗೆ ಬೆಂಕಿ ಹತ್ತಿಸಿಕೊಂಡು ಮಹದೇವಮ್ಮಳ ಮೈಗೆ ಹತ್ತಿಸಿದನೆಂದು, ಆರಿಸಲು ಹೋದ ನನಗೆ ಸುಟ್ಟ ಗಾಯಗಳಾದವು ಎಂದು ತಿಳಿಸಿದರು ಎಂದರೆ ನನಗೆ ಗೊತ್ತಿಲ್ಲ.

9. ಆ್ಯಂಬುಲೆನ್ಸ್ ಬಂದ ನಂತರ ಪ್ರಾಸಾ.3 ರವರು ಮಹದೇವಮ್ಮಳ ಬಟ್ಟೆಯನ್ನು ಬದಲಾಯಿಸಿದ್ದರು ಹಾಗೂ ನಾವು ಪ್ರಾಸಾ.1 ರವರ ಮೈ ಮೇಲಿನ ಜರ್ಕಿನ್ ಬದಲಾಯಿಸಿ, ಮಳವಳ್ಳಿ ಆಸ್ಪತ್ರೆಗೆ ಚಿಕಿತ್ಸೆ ಗೆ ಕಳುಹಿಸಿಕೊಟ್ಟೆವು ಎಂದರೆ ನನಗೆ ಗೊತ್ತಿಲ್ಲ. ಮುದ್ದೆ ಮಾಲು.3 ರಿಂದ 6 ನ್ನು ನಾನು ಆ ಸಮಯದಲ್ಲಿ ನೋಡಿದ್ದೆನು ಎಂದರೆ ಗೊತ್ತಿಲ್ಲ.

10. ಸದರಿ ಸುಟ್ಟ ಗಾಯಗಳಿಂದ ದಿಃ 30.08.2022 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಮಹದೇವಮ್ಮ ತೀರಿಕೊಂಡ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.

11. ದಿಃ 03.09.2022 ರಂದು ನಾನು ಈ ಪ್ರಕರಣದ ಸಂಬಂಧದಲ್ಲಿ ಪೊಲೀಸ್ ಠಾಣೆಗೆ ಹೋಗಿದ್ದೆನು ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

12. ಸಾಕ್ಷಿಗೆ ಹೇಳಿಕೆಯ ‘‘ ದಿನಾಂಕ 03.08.2022 ರಂದು ........................................................ ಮತ್ತೆ ನೋಡಿದರೆ

ಗುರುತಿಸುತ್ತೇನೆ '' ಎಂಬ ಭಾಗವನ್ನು ಅಭಿಯೋಜಕರು ಓದಿಹೇಳಿದ್ದು, ಸದರಿ ಹೇಳಿಕೆಯ ಭಾಗವನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ.19 ಎಂದು ಗುರುತಿಸಲಾಯಿತು.

13. ಆರೋಪಿಯ ಮಕ್ಕಳು, ಹಬ್ಬ ಹರಿದಿನಗಳಿಗೆ ನಮ್ಮ ಊರಿಗೆ ಬಂದಾಗ, ಅವರು ಊರಿನವರನ್ನು ಭೇಟಿ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಮಕ್ಕಳು, ಸದರಿ ಫ್ರಾಸಾ. 1 ರವರಿಗೆ ಮದುವೆ ಮಾಡಿಸಿ, ಸದರಿ ಮನೆಯಲ್ಲಿ ಇರಿಸಬೇಕೆಂದು ನಮ್ಮನ್ನು ಕೇಳಿಕೊಳ್ಳುತ್ತಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಜೈಲಿನಲ್ಲಿ ಇರುವ ಕಾರಣ, ಫ್ರಾಸಾ. 1 ರವರಿಗೆ ಮದುವೆ ಸಂಬಂಧಗಳು ಆಗುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಕಾರಣದಿಂದ, ಫ್ರಾಸಾ.1 ರವರಿಗೆ ಮದುವೆ ಮಾಡಿಸಬೇಕು ಎಂದು ಆರೋಪಿಯನ್ನು ಹೇಗಾದರೂ ಮಾಡಿ ಪ್ರಕರಣದಿಂದ ಮುಕ್ತಗೊಳಿಸಬೇಕು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹದೇವಮ್ಮ ರವರಿಗೆ, ಆರೋಪಿಯೇ ಸೀಮೆಎಣ್ಣೆ ಹಾಕಿ, ಸುಟ್ಟಿದ್ದಾನೆ ಎಂದು ನನಗೆ ಗೊತ್ತಿದ್ದರೂ ಸಹ ಫ್ರಾಸಾ.4 ಮತ್ತು 7 ರವರ ಕೋರಿಕೆಯಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಕೆ ಟಿ ಎಸ್ ವಕೀಲರು, chief defence counsel ರವರಿಂದ ಃ**

14. ನಮ್ಮ ಬೀದಿಯಲ್ಲಿ, ನಮ್ಮ ಮನೆಯು ಆರೋಪಿಯ ಮನೆಯ ಮುಂಭಾಗದಲ್ಲಿ ಇರುವ ಮನೆಯಿಂದ ಮೂರನೇ ಮನೆಯಾಗಿರುತ್ತದೆ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.